## ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 116 / 2025

**ಚಾಸಾ ಃ- 02 / ಪ್ರಾಸಾ ಃ- 01**

| | |
|---|---|
| ಹೆಸರು | ಎಂ ಜಿ ಜಯಾನಂದಸ್ವಾಮಿ |
| ತಂದೆ ಹೆಸರು | ಗಂಗರಂಗಯ್ಯ |
| ವಯಸ್ಸು | 81 |
| ಉದ್ಯೋಗ | ಪತ್ರಕರ್ತ |
| ವಿಳಾಸ | ಮಾಗಡಿ ಟೌನ್ |

**ದಿನಾಂಕಃ 26.03.2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** ಃ-

ಚಾಸಾ 1 ನನ್ನ ಪತ್ನಿ , ಚಾಸಾ 3 ರಿಂದ 7 ರವರು ಪರಿಚಯ ಇರುತ್ತಾರೆ. ಆರೋಪಿ ಪರಿಚಯ ಇರುತ್ತಾರೆ. ದಿನಾಂಕ 15.11.2025 ರಂದು ನನ್ನ ಎಡಕಣ್ಣಿನ ಶಸ್ತ್ರಚಿಕಿತ್ಸೆ ಮಾಡಿ ಲೆನ್ಸ್ ಹಾಕಿದ್ದರು ಹಾಗೂ ದಿನಾಂಕ 21.11.2025 ರಂದು ನನ್ನ ಬಲಕಣ್ಣಿನ ಶಸ್ತ್ರಚಿಕಿತ್ಸೆ ಮಾಡಿ ಲೆನ್ಸ್ ಹಾಕಿದ್ದರು. ಸಂಜೆ 5.00 ಗಂಟೆಗೆ ವಿಠ್ಠಲ್ ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿರುತ್ತಾರೆ. ಮಾರನೆ ದಿನ ಬೆಳಿಗ್ಗೆ 9.00 ಗಂಟೆ ಸುಮಾರಿನಲ್ಲಿ ಮಾಗಡಿಯ ಕಲ್ಯಾ ಗೇಟ್ ಬಳಿ ಇರುವ ಗ್ರಾಮದೇವತೆ ದೇವಸ್ಥಾನದ ಹತ್ತಿರ ಮೂರ್ತಿ ಹೋಟೆಲ್ ಗೆ ಟೀ ಕುಡಿಯಲು ಸ್ನೇಹಿತರಾದ ಚಾಸಾ 3 ಮತ್ತು 8 ರವರ ಜೊತೆ ಹೋಗಿದ್ದೆನು. ನಾನು ಹೋಟೆಲ್ ಗೆ ಹೋದಾಗ 1 ನೇ ಆರೋಪಿಯು ಸುಮಾರು 10 ಅಡಿ ದೂರದಲ್ಲಿ ಕೂತಿದ್ದರು. ನಾನು ಹೋದಾಗ ನನಗೆ ಅವಾಚ್ಯ ಶಬ್ದಗಳಿಂದ ಬೈಯ್ಯುತ್ತ ಹತ್ತಿರ ಬಂದು ಹಲ್ಲೆ ಮಾಡಲು ಮುಂದಾಗಿರುತ್ತಾರೆ. ಆಗ ನಾನು ನೆನ್ನೆತಾನೆ ಡಿಸ್ಚಾರ್ಜ್ ಆಗಿರುತ್ತೇನೆ ಕಣ್ಣು ಆಪರೇಶನ್ ಆಗಿರುತ್ತದೆ ದೂರ ನಿಂತು ಮಾತನಾಡು ಎಂದು ಹೇಳಿರುತ್ತೇನೆ. 1 ನೇ ಆರೋಪಿಯು ತನ್ನ ತಲೆಯಿಂದ ನನ್ನ ಹಣೆಗೆ ಡಿಚ್ಚಿ ಹೊಡೆದಿರುತ್ತಾನೆ. ಅಷ್ಟರಲ್ಲಿ ಅಕ್ಕಪಕ್ಕದವರು ಬಿಡಿಸಿಕೊಳ್ಳಲು ಬಂದರೂ ನನ್ನ

ಭುಜ , ಕುತ್ತಿಗೆ ಮತ್ತು ಬೆನ್ನಿಗೆ ಗುದ್ದಿರುತ್ತಾರೆ. ನಂತರ ನಾನು ನನ್ನ ಸ್ನೇಹಿತನ ಅಂಗಡಿಯಾದ ರಮೇಶ್ ಬ್ಯಾಂಗಲ್ ಸ್ಟೋರ್ ಹತ್ತಿರ ಬಂದು ಶೋಕೇಸ್ ಗೆ ಒರಗಿಕೊಂಡು ನಿಂತಿದ್ದೆನು. ನಂತರ 2 ನೇ ಆರೋಪಿಯು ಬಂದು ನನ್ನ ಕುತ್ತಿಗೆಗೆ ಕೈ ಹಾಕಿ ತಳ್ಳಿರುತ್ತಾರೆ. ಆಗ ಶೋಕೇಶ್ ಬಿದ್ದುಹೋಗಿರುತ್ತದೆ ಹಾಗೂ ನಾನು ಬಿದ್ದಿರುತ್ತೇನೆ. ನಾನು ಬಿದ್ದಾಗ 2 ನೇ ಆರೋಪಿಯು ಕೈಯಿಂದ ನನ್ನ ಭುಜ ಮತ್ತು ಬೆನ್ನಿನ ಮೇಲೆ ಹಲ್ಲೆ ಮಾಡಿ ಕಾಲಿನಿಂದ ಒದ್ದಿರುತ್ತಾರೆ. 1 ನೇ ಆರೋಪಿಯು ನನಗೆ ಡಿಚ್ಚಿ ಮಾಡಿದಾಗ ನನ್ನ ಮೂಗಿನಲ್ಲಿ ರಕ್ತ ಬಂದಿರುತ್ತದೆ ಹಾಗೂ ಆಸ್ಪತ್ರೆಯಲ್ಲಿ 15 ದಿವಸ ಉಪಯೋಗಿಸಲು ಕೊಟ್ಟಿದ್ದ ಕನ್ನಡಕ ಹೊಡೆದುಹೋಗಿರುತ್ತದೆ. ಅಷ್ಟರಲ್ಲಿ ಅಲ್ಲಿದ್ದವರು ನನಗೆ ರಕ್ತಹೋಗುತ್ತಿದೆ ಕರ್ಚಿಫ್ ನಿಂದ ಒರೆಸಿಕೊಳ್ಳಿ ಎಂದು ಹೇಳಿದರು ಹಾಗೂ ನನ್ನ ಶರ್ಟ್ ಗೂ ರಕ್ತದ ಕಲೆ ಆಗಿರುತ್ತದೆ. ಯಾರೋ ನನ್ನ ಮನೆಯವರಿಗೆ ಪೋನ್ ಮಾಡಿರುತ್ತಾರೆ. ನನಗೆ ಬರೆಯುವ ಶಕ್ತಿ ಇರದ ಕಾರಣ ನನ್ನ ಪತ್ನಿಯವರೆ ದೂರನ್ನು ದಿನಾಂಕ 22.11.2024 ರಂದು ದೂರನ್ನು ಕೊಟ್ಟಿರುತ್ತಾರೆ. ದೂರನ್ನು ಕೊಟ್ಟ ನಂತರ ಮಾರನೆ ದಿವಸ ಪೋಲಿಸರು ಸ್ಪಾಟ್ ಗೆ ಬಂದು ಮಹಜರ್ ಜರುಗಿಸಿರುತ್ತಾರೆ. ಮಹಜರನ್ನು ಮೂರ್ತಿ ಹೋಟೆಲ್‌ನಲ್ಲಿ ಹಾಗೂ ರಮೇಶ್ ಫ್ಯಾನ್ಸಿ ಸ್ಟೋರ್ ನಲ್ಲಿ ಜರುಗಿಸಿರುತ್ತಾರೆ ಹಾಗೂ ಪೋಟೋವನ್ನು ತೆಗೆದಿರುತ್ತಾರೆ. ದಿನಾಂಕ 23.11 ರಂದು ಸುಮಾರು 11 ಗಂಂಟೆಗೆ ಪೋಲಿಸರು ಬಂದಿದ್ದರು. ಮಹಜರ್ ಸಮಯದಲ್ಲಿ ನನ್ನ ಮಗ ರಘು, ಅವನ ಸ್ನೇಹಿತ ಗಿರೀಶ್ ಇದ್ದರು. ಮಹರಜ್ ಸಮಯದಲ್ಲಿ ನಾನು ರಕ್ತ ಕಲೆಯಾಗಿದ್ದ ನನ್ನ ಶರ್ಟ್ ಮತ್ತು ಕರ್ಚೀಪ್ ಹಾಗೂ ಹೊಡೆದುಹೋಗಿದ್ದ ಕನ್ನಡಕವನ್ನು ಕೊಟ್ಟಿರುತ್ತೇನೆ.

ಈಗ ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಕೃತ್ಯಸ್ಥಳದ ಪಂಚನಾಮೆಯನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಪೋಟೋಗಳನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಪೋಟೋವನ್ನು ನಿಪಿ-02 ಮತ್ತು ನಿಪಿ-03 ಎಂದು ಗುರುತಿಸಲಾಯಿತು. ಸದರಿ ಶರ್ಟ್, ಕರ್ಚೀಪ್ ಮತ್ತು ಕನ್ನಡಕವನ್ನು ನೋಡಿದರೆ

ಗುರುತಿಸುತ್ತೇನೆ. ಈಗ ಸಾಕ್ಷಿಗೆ ಶರ್ಟ್, ಕರ್ಚೀಪ್ ಕನ್ನಡಕವನ್ನು ತೋರಿಸಲಾಗಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮುದ್ದೆಮಾಲು 1 ರಿಂದ 3 ಎಂದು ಗುರುತಿಸಲಾಯಿತು. ತನಿಖೆ ಕಾಲದಲ್ಲಿ ತನಿಖಾಧಿಕಾರಿಯವರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಯು ನ್ಯಾಯಾಲಯದಲ್ಲಿರುವ 2ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು** ಃ- **ಶ್ರೀ. ಟಿ ಕೆಹೆಚ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಆರೋಪಿ ಮತ್ತು ಅವರ ಸಹೋದರಿ ಚಂದ್ರಮ್ಮ ರವರು ನಿಮ್ಮ ಮನೆಯ ಲಗತ್ತಾಗಿ ವಾಸ ಇರುವುದು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಚಂದ್ರಮ್ಮ ಹಾಗೂ ನಿಮ್ಮ ಮನೆಗೆ ಒಂದೇ ಗೋಡೆ ಇತ್ತು ಎಂದರೆ ಸಾಕ್ಷಿ ಈ ಹಿಂದೆ ಇತ್ತು ಎಂದು ನುಡಿಯುತ್ತಾರೆ. ಸದರಿ ಗೋಡೆಯನ್ನು ಚಂದ್ರಮ್ಮ ರವರು ತೆಗೆದು ಪ್ರತ್ಯೇಕ ಗೋಡೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಿಮಗೂ ಮತುತ ಸದರಿ ಚಂದ್ರಮ್ಮ ರವರಿಗೆ ಸಿವಿಲ್ ವ್ಯಾಜ್ಯ ಇತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ವ್ಯಾಜ್ಯವು ನ್ಯಾಯಾಲಯದಲ್ಲಿ ಮುಕ್ತಾಯವಾಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಚಂದ್ರಮ್ಮ ರವರು 1 ನೇ ಆರೋಪಿಯ ಸ್ವಂತ ಸಹೋದರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ವ್ಯಾಜ್ಯ ಇದ್ದಿದ್ದರಿಂದ ನಿಮಗೂ ಮತ್ತು ಸದರಿ ಚಂದ್ರಮ್ಮರವರಿಗೂ ಅಷ್ಟಕ್ಕಷ್ಟೆ ಇತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ದಿನಾಂಕ 22.11.2024 ರ ಎಷ್ಟು ದಿವಸದ ಹಿಂದೆ ನಿಮಗೆ ಕಣ್ಣಿನ ಆಪರೇಷನ್ ಆಗಿತ್ತು ಎಂದರೆ ಸಾಕ್ಷಿ ಅದರ ಹಿಂದಿನ ದಿವಸ ಎಂದು ನುಡಿಯುತ್ತಾರೆ. ಯಾವ ಕಾರಣಕ್ಕಾಗಿ ಕಣ್ಣು ಕಾಣುತ್ತಿದ್ದಿದ್ದಿರಲಿಲ್ಲ ಎಂದರೆ ಸಾಕ್ಷಿ ವಯಸ್ಸಾಗಿದ್ದರಿಂದ ಎಂದು ನುಡಿಯುತ್ತಾರೆ. ಕಣ್ಣು ಆಪರೇಷನ್ ಆದಾಗ

ಹೊರಗಡೆ ಓಡಾಡುವಹಾಗಿಲ್ಲ ಎಂದರೆ ಸಾಕ್ಷಿ ಬ್ಯಾಂಡೇಜ್ ತೆಗೆದು ಕನ್ನಡಕ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಕಣ್ಣಿನ ಆಪರೇಷನ್ ಆದಾಗ ತಕ್ಷಣ ಕಣ್ಣು ಕಾಣುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನಿಮಗೆ ಆರೋಪಿಗಳು ಯಾವುದೇ ಹಲ್ಲೆ ಮಾಡಿರುವುದಿಲ್ಲ ಹಾಗೂ ಯಾವುದೇ ಘಟನೆ ನಡೆದಿರುವುದಿಲ್ಲ ಸದರಿ ಚಂದ್ರಮ್ಮ ಮತ್ತು ನಿಮ್ಮ ನಡುವೆ ಸಿವಿಲ್ ವ್ಯಾಜ್ಯ ಇರುವುದರಿಂದ ಸುಳ್ಳು ದೂರನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ದೂರಿನಲ್ಲಿ ಇರುವ ಬರವಣಿಗೆ ನಿಮ್ಮದೆ ಎಂದರೆ ಸಾಕ್ಷಿ ಇಲ್ಲ ಚಾಸಾ 1 ರವರದ್ದು ಎಂದು ನುಡಿಯುತ್ತಾರೆ. 2ನೇ ಆರೋಪಿ ಹಾಗೂ ಅವರ ಮೃತ ತಂದೆ ನಿಮಗೆ ಯಾವುದೇ ಹಲ್ಲೆ ಮಾಡಿರುವುದಿಲ್ಲ ಹಾಗೂ ತಲೆಯಿಂದ ಡಿಚ್ಚಿ ಹೊಡೆದಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಕರ್ಚೀಫ್ ನಿಂದ ರಕ್ತ ಒರೆಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ಕನ್ನಡಕವನ್ನು ತೋರಿಸಲಾಗಿ ಸದರಿ ಕನ್ನಡಕ ಒಡೆದಿರುವುದಿಲ್ಲ ಎಂದರೆ ಸಾಕ್ಷಿ ಮುರಿದಿದೆ ಎಂದು ನುಡಿಯುತ್ತಾರೆ. ಚಾಸಾ 3 ರವರೂ ಸಹ ನಿಮ್ಮ ಸ್ನೇಹಿತರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಚಾಸಾ 3 ರವರಿಗೆ ನೀವು ಸಾಕಷ್ಟು ಕೆಲಸ ಕಾರ್ಯಗಳನ್ನು ಮಾಡಿಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚಾಸಾ 1 ರವರು ನಿಮ್ಮ ಪತ್ನಿಯಾಗಿರುವುದರಿಂದ, ಚಾಸಾ 3 ರವರು ನಿಮಗೆ ಪರಿಚಯ ಇರುವುದರಿಂದ ಹಾಗೂ ಚಾಸಾ 10 ರವರಎ ನಿಮ್ಮ ಮಗನಾದಕಾರಣ ನಿಮಗೆ ಅನುಕೂಲವಾಗಲಿ ಎಂದು ಒಂದು ಸುಳ್ಳು ದೂರನ್ನು ಕೊಟ್ಟಿರುತ್ತೀರಿ ಎಂದರೆ ಸಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಮುದ್ದೆಮಾಲು 1 ರಿಂದ 3 ಅನ್ನು ನೀವೆ ಪೋಲಿಸ್ ಠಾಣೆಗೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಸ್ಥಳದಲ್ಲಿ ಪೋಲಿಸರಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಯಾವುದೇ ಘಟನೆ ನಡೆದಿರುವುದಿಲ್ಲ ಆ ಕಾರಣದಿಂದಲೇ ಪೋಲಿಸರು ಸ್ಥಳಕ್ಕೆ ಬಂದಿರುವುದಿಲ್ಲ, ಮಹಜರ್ ಜರುಗಿಸಿರುವುದಿಲ್ಲ ಹಾಗೂ ಸ್ಥಳದಲ್ಲಿ ಪೋಟೋಗಳನ್ನು ತೆಗೆದಿರುವುದಿಲ್ಲ ಎಂದರೇ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. 2 ನೇ ಆರೋಪಿ ಮತ್ತು ನಿಮ್ಮ ನಡುವೆ ನೀವು ಹೇಳುವ ದಿನಾಂಕ 22.11.2024 ರ ಘಟನೆ ನಡೆದಿದೆ

ಎಂದು ಹೇಳುವ ಸಂಬಂಧ ರಾಜಿ ಮಾತುಕತೆ ನಡೆದಿದೆಯೆ ಎಂದರೆ ಸಾಕ್ಷಿ ನಡೆದಿದೆ ಎಂದು ನುಡಿಯುತ್ತಾರೆ. ಆ ಪ್ರಕಾರ ನೀವು ರಾಜಿ ಮಾಡಿಕೊಂಡು ವಾಪಸ್ಸು ಪಡೆಯುತ್ತೇನೆ ಎಂದು ಹೇಳಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ವಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದುವರೆದ ವಾಟೀಸವಾಲಿಗೆ ಮುಂದೂಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**